**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No. 36/2023**

ಆರ್**.**ಡಬ್ಲ್ಯೂ**. 1**

ದಿನಾಂಕಃ **19.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ **1** ನೇ ಎದುರುದಾರರ ಪರವಾಗಿಃ ಡಿಜಿಪಿ ರವರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಹೆಚ್**.**ಆರ್**.**ಕೆ**.** ವಕೀಲರಿಂದಃ

1. ಅರ್ಜಿದಾರರ ಸ್ವಾಧೀನವಾದ ಜಮೀನು ಭೂ ಪರಿವರ್ತಿತ ಜಮೀನು. ಭೂ ಸ್ವಾದೀನವಾದ ಜಮೀನು ದಿ.27.06.1991 ರಲ್ಲಿ ಸರ್ವೇ ನಂ.62/2 ರಲ್ಲಿ 2 1/4 ಗುಂಟೆ ಜಮೀನು ಕೃಷಿಯೇತರ ಜಮೀನಾಗಿದ್ದು ಉಳಿದ ಎಲ್ಲಾ ಜಮೀನು ವ್ಯವಸಾಯದ ಜಮೀನು. ಒಂದು ಚದುರ ಅಡಿಗೆ 150 ರೂಪಾಯಿಯಂತೆ ಪರಿಹಾರ ನಿಗಧಿಪಡಿಸಿರುತ್ತೇನೆ. ಸರ್ವೇ ನಂ.62/3, ಸರ್ವೇ ನಂ.62/4, ಸರ್ವೇ ನಂ.62/6 ರ ಜಮೀನು ಭೂ ಪರಿವರ್ತಿತವಾಗಿರುತ್ತದೆ ಎಂದರೆ ಸರಿಯಲ್ಲ, ಸರ್ವೇ ನಂ.62/6 ರಲ್ಲಿ 6 ಗುಂಟೆ ಜಮೀನು ಭೂ ಪರಿವತರ್ತಿವಾಗಿರುತ್ತದೆ ಎಂದರೆ ಸರಿ. ದಿ.17.08.2013 ರಲ್ಲಿ ಸರ್ವೇ ನಂ.62/4 ರಲ್ಲಿ 14 ಗುಂಟೆ

ಮತ್ತು ಸರ್ವೇ ನನಂ.62/5 ರಲ್ಲಿ 6 ಗುಂಟೆ ಜಮೀನು ಭೂ ಪರಿವರ್ತಿವಾಗಿರುತ್ತದೆ ಎಂದರೆ ಸರಿ. ನಿ.ಪಿ.24 ರ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಜಿಲ್ಲಾಧಿಕಾರಿಗಳಿಗೆ ಸರ್ವೇ ನಂ.62/2 ರ 2 -1/4 ಗುಂಟೆ ಜಮೀನಿಗೆ ಹೆಚ್ಚಿನ ಪರಿಹಾರ ಕೊಡಲು ಮನವಿ ಕೊಟ್ಟ ವಿಚಾರ ನನಗೆ ಮಾಹಿತಿ ಇಲ್ಲ. ಈ ಬಗ್ಗೆ ನಮ್ಮ ಕಛೇರಿಯಿಂದ ದಾಖಲಾತಿಗಳನ್ನು ಜಿಲ್ಲಾದಿಕಾರಿಗಳ ಕಛೇರಿಗೆ ಸಲ್ಲಿಸಿರುತ್ತೇನೆ ಎಂದರೆ ಈ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಹಿಂಬರಹ ಕೊಟ್ಟಿರುತ್ತಾರೆ ಸಾಕ್ಷಿ ಅರ್ಜಿದಾರರು ಸಲ್ಲಿಸಿರುವ ಅರ್ಜಿ ಊರ್ಜಿತವಲ್ಲ ಎಂದು ಜಿಲ್ಲಾಧಿಕಾರಿಗಳ ಆದೇಶದಲ್ಲಿ ನಮೂದು ಮಾಡಿರುವ ಹಿಂಬರಹದಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ದಾಖಲಾತಿ ನೋಡಿ ಉತ್ತರಿಸಿರುತ್ತಾರೆ.

ಬೆಳಗಿನ ಕಾಲಾವಧಿ ಮುಗಿದ ಕಾರಣ ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಯಿತು

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಮಧ್ಯಾಹ್ನದ ಕಲಾಪದಲ್ಲಿ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಹೆಚ್.ಆರ್.ಕೆ. ವಕೀಲರಿಂದಃ

2. ದಿ.05.07.2013 ರ ಅಧಿಸೂಚನೆಯಂತೆ ನವೆಂಬರ್ 2013 ರಲ್ಲಿ ಭೂ ಸ್ವಾಧೀನಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ ಸರ್ವೇ ನಂಬರ್ ಆಸ್ತಿಗಳಿಗೆ ಸಂಬಂಧಿಸಿದಂತೆ ಪರಿಹಾರದ ಹಣವನ್ನು ಅರ್ಜಿದಾರರು ಸ್ವೀಕರಿಸಿಲ್ಲ. ಸ್ವಾಧೀನಗೊಂಡ ಜಮೀನಿನ ಪರಿಹಾರದ ಹಣಕ್ಕೆ ಸಂಬಂಧಿಸಿದಂತೆ ರಿಟ್ ಪಿಟೀಷನ್ ನಂ.3201/2017 ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನಕ್ಕೆ ಬಾಕಿ ಇರುವ ಬಗ್ಗೆ ಮಾಹಿತಿ ಇಲ್ಲ. ನಿ.ಪಿ.18 ರ ರಿಟ್ ಅರ್ಜಿ ಆದೇಶದ ಬಗ್ಗೆ ನನಗೆ ಸೂಕ್ತ ಮಾಹಿತಿ ಇಲ್ಲ. ಪತ್ರಿಕಾ ಪ್ರಕಟಣೆಗಿಂತ ಮೂರು ತಿಂಗಳ ಮೊದಲು ಸರ್ವೇ ನಂ. 62/2 ರಲ್ಲಿ 1 ಎಕರೆ 4 ಗುಂಟೆ , ಸರ್ವೇ ನಂ.66/2 ರಲ್ಲಿ 6 ಗುಂಟೆ ಜಮೀನು ಭೂ ಪರಿವರ್ತನೆಗೆ ಆದೇಶವಾಗಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೇ ನಂ.62/4 ರಲ್ಲಿ 18 ಗುಂಟೆ , ಸರ್ವೇ ನಂ. 62/5 ರಲ್ಲಿ 6 ಗುಂಟೆ, ದಿ.17.08.2013 ರಲ್ಲಿ ಭೂ ಪರಿವರ್ತನೆ ಆದೇಶವಾಗಿರುವ ವಿಚಾರ ನನಗೆ ಗೊತ್ತಿಲ್ಲ. ನಿ.ಪಿ.27 ರನ್ವಯ ಹೆಚ್ಚಿನ ಪರಿಹಾರಕ್ಕಾಗಿ ಸರ್ವೇ ನಂ.62/2 ರ ಆಸ್ತಿಗೆ ಸಂಬಂಧಿಸಿದ ನಿಗದಿಪಡಿಸಿದ ಪರಿಹಾರದಂತೆ ಉಳಿದ ಸರ್ವೇ ನಂಬರ್ ನ ಅಸ್ತಿಗೂ

ನಿಗಧಿಪಡಿಸುವಂತೆ ಅರ್ಜಿದಾರರು ತಕರಾರು ಅರ್ಜಿ ಸಲ್ಲಿಸಿದ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಯ ಸರ್ವೇ ನಂಬರ್ ನ ಅಸ್ತಿಗೂ ರಸ್ತೆಗೆ ಹೊಂದಿಕೊಂಡಂತೆ ಇರುವುದರಿಂದ ಮತ್ತು ನಿವೇಶನಗಳಾಗಿ ಪರಿವರ್ತನೆ ಆಗಿರುವುದರಿಂದ ಹೆಚ್ಚಿನ ಮೌಲ್ಯ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.62/2 ರ ಆಸ್ತಿಗೆ ಸಂಬಂಧಿಸಿದಂತೆ ನಿಗಧಿಪಡಿಸಿದ ಪರಿಹಾರವನ್ನು ಅರ್ಜಿದಾರರ ಇತರೇ ಸರ್ವೇ ನಂಬರ್ ನ ಅಸ್ತಿಗೂ ಪರಿಹಾರ ನಿಗಧಿಪಡಿಸಬೇಕು ಎಂದರೆ ಸರಿಯಲ್ಲ. ಅರ್ಜಿದಾರರು ಅನ್ಯಾಯವಗುವ ರೀತಿಯಲ್ಲಿ ಪರಿಹಾರ ನಿಗಧಿಪಡಿಸಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರು ಹೆಚ್ಚಿನ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾವಧೀನಗೊಂಡ ಆಸ್ತಿಗಳಲ್ಲಿ 24 ನಿವೇಶನಗಳು ಇರುತ್ತದೆ ಎಂದರೆ ಸಾಕ್ಷಿ ಈ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

3. ಬುಕ್ಕಾಪಟ್ಟಣ ಗ್ರಾಮದ ಜಮೀನಿಗೆ 1 ಸ್ಕ್ವೇರ್ ಪೀಟ್ ಗೆ 2000 ರೂಪಾಯಿ ಮೌಲ್ಯ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಹೆಚ್ಚಿನ ಪರಿಹಾರ ನಿಗಧಿಡಿಸಲು ಸರ್ಕಾರದಿಂದ ಜಿಲ್ಲಾಧಿಕಾರಿಗಳು ಮಧ್ಯಸ್ಥಗಾರರನ್ನಾಗಿ ನೇಮಕ ಮಾಡಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನಮ್ಮ ಕಛೇರಿಯ ಮೂಲಕ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅರ್ಜಿದಾರರಿಗೆ ಸ್ಕ್ವೇರ್ ಪೀಟ್ ಆಧಾರದಲ್ಲಿ ಸೂಕ್ತ

ಮತ್ತು ವೈಜ್ಞಾನಿಕ ಪರಿಹಾರವನ್ನು ನಿಗಧಿ ಪಡಿಸುವ ಅಧಿಕಾರ ಇದ್ದರೂ ಸಹಾ ಗುಂಟೆ ಆಧಾರದಲ್ಲಿ ಪರಿಹಾರವನ್ನು ನಿಗಧಿಪಡಿಸಿ ಅರ್ಜಿದಾರರಿಗೆ ನಾವು ನಮ್ಮ ಇಲಾಖೆಯಿುಂದ ಅನ್ಯಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಪಾವತಿ ಮಾಡಲು ನಮ್ಮ ಇಲಾಖೆ ಬಾದ್ಯಸ್ಥರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪಾವತಿ ಮಾಡಿರುವ ಪರಿಹಾರ ಸೂಕ್ತ ಮತ್ತು ವೈಜ್ಞಾನಿಕವಾಗಿರುತ್ತದೆ. ಪಟ್ಟಣ ಪಂಚಾಯಿತಿಯಿಂದ ಬುಕ್ಕಾಪಟ್ಟಣ ಗ್ರಾಮ 18 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**C.Mis. /2019**

ಪಿ**.**ಡಬ್ಲ್ಯೂ**. 1**

ದಿನಾಂಕಃ**03.10.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ

ಮರುವಿಚಾರಣೆಃ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು